## ಕಲ್ಲುಗಳಂತೆ ಬಂಡೆಗಳ ಜೋಡಿಸಿಟ್ಟ ಪ್ರಕೃತಿ

ಚಿತ್ರದುರ್ಗದಿಂದ 8 ಕಿ.ಮೀ. ದೂರದ ಜಾನುಕೊಂಡ (ಹೊಳಲ್ಕೆರೆ ರಸ್ತೆ) ಬಳಿ ಪಾಂಡುರಂಗನಾಥಸ್ವಾಮಿ ಬೆಟ್ಟವಿದೆ. ಆ ಬೆಟ್ಟದ ಬಳಿ ಈ ಚಿತ್ರದಲ್ಲಿ ಕಾಣುತ್ತಿರುವ ಒಂದರ ಮೇಲೊಂದರಂತೆ ಜೋಡಿಸಿಟ್ಟ ಕಲ್ಲುಗಳನ್ನು ನೋಡಬಹುದು. ಲಗೋರಿ ಆಡುವಾಗ ಒಂದರ ಮೇಲೊಂದು ಕಲ್ಲುಗಳನ್ನು ಜೋಡಿಸಿಟ್ಟಂತೆ ಇಲ್ಲಿ ಒಂದರ ಮೇಲೊಂದರಂತೆ ಬಂಡೆಗಳನ್ನು ಪ್ರಕೃತಿಯೇ ಜೋಡಿಸಿಟ್ಟಿದೆ. ನೂರಾರು ವರ್ಷಗಳಿಂದ ಇದೇ ರೀತಿ ಈ ಬಂಡೆಗಳು ಇವೆಯಂತೆ.

■ **ಡಾ. ಕೆ.ವಿ. ಸಂತೋಷ್, ಹೊಳಲ್ಕೆರೆ**





## ‘ಗಿಳಿರಾಜನ ಸಂಸಾರಕ್ಕೊಂದು ಸೂರು’

ಪಕ್ಷಿ ಸಂಕುಲ, ಸಂತಾನೋತ್ಪತ್ತಿ ಕಾಲದಲ್ಲಿ (ಮೊಟ್ಟೆ ಇಡುವ ಸಮಯ) ಅದರ ಮೊದಲ ಕೆಲಸ ಗೂಡು ಕಟ್ಟುವುದು. ಅಪಾಯ ಎದುರಾಗದ ಹಾಗೆ, ಮುಳ್ಳಿನಮರ, ಬಾವಿಯೊಳಗಿನ ಮರದ ಟೊಂಕೆ, ಎತ್ತರದ ಬಂಡೆಯ ಪೊಟರೆಗಳಲ್ಲಿ (ಅದರಲ್ಲಿ ಗೀಜಗನ ಅಕ್ಕಿ ನಾರಿನಲ್ಲಿ ಒಂದು ಮನೆ ಕಟ್ಟುತ್ತದೆ) ಗೂಡು ಕಟ್ಟುತ್ತವೆ. ಈ ಜಾಣ ಗಿಳಿ ಜೋಡಿಗಳು ಎತ್ತರದ ತೆಂಗಿನಮರದ ತುದಿಯಲ್ಲಿದ್ದ ಪೊಟರೆಯಲ್ಲಿ ಎಲೆ, ಹುಲ್ಲು, ಕಡ್ಡಿ, ನಾರುಬೇರುಗಳನ್ನು ಸೇರಿಸಿ ಅಚ್ಚುಕಟ್ಟಾಗಿ ಗೂಡು ಮಾಡುತ್ತವೆ. ಅದರಲ್ಲಿ ಮೊಟ್ಟೆ ಇಟ್ಟು, ಕಾವುಕೊಟ್ಟು, ಮೊಟ್ಟೆಯಿಂದ ಹೊರಬಂದ ಮೇಲೆ ಪ್ರತಿನಿತ್ಯ ಗಂಡು ಹೆಣ್ಣು ಗಿಳಿಗಳು ಆಹಾರ ಕೊಟ್ಟು ಬೆಳೆಸುತ್ತವೆ. ಅಂತೆಯೇ ಈ ಚಿತ್ರದಲ್ಲಿ ಕಾಣುತ್ತಿರುವ ಗಿಣಿಗಳು. ತಂದೆ ತಾಯಿ ಮತ್ತು ಮರಿ ಪಕ್ಷಿಗಳು ಉಭಯಕುಶಲೋಪರಿ ವಿಚಾರಿಸುವಂತಿದೆ ಈ ಚಿತ್ರದ ನೋಟ. ಈ ಅಪರೂಪದ ಚಿತ್ರವನ್ನು ಅಳಿಯ ಎನ್.ಎನ್. ರಾಜು ಕ್ಲಿಕ್ಕಿಸಲು ಮನೆಯ ಮುಂದಿನ ತೆಂಗಿನ ಮರ ಸಾಕ್ಷಿಯಾಯಿತು.

■ **ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ**



## ಕಂಬಳಿಹುಳುಗಳ ಸಭೆ

ನಮ್ಮ ಶಾಲಾ ಆವರಣದಲ್ಲಿನ ನೇರಳೆ ಮರದ ಕಾಂಡವೊಂದರ ಮೇಲೆ ಸಾಲಾಗಿ ಕುಳಿತು ಚಳಿಯಿಂದ ಬಚಾವಾಗುವುದು ಹೇಗೆಂದು ಸಮಾಲೋಚನಾ ಸಭೆ ನಡೆಸುತ್ತಿರುವಂತೆ ಕಂಡುಬಂದ ಕಂಬಳಿಹುಳುಗಳ ಗುಂಪಿನ ಚಿತ್ರವಿದು. ಹೀಗಾಗಲೇ ಮೈಜುಮ್ಮೆನ್ನುವ ಚಳಿ ಈಗಾಗಲೇ ದೂರವಾಗಿದ್ದು, ಮಾನವನಾದಿಯಾಗಿ ಸಕಲ ಚರಾಚರ ಜೀವಿಯೂ ಕೊರೆವ ಆ ಚಳಿಗೆ ನಡುಗುವುದುಂಟು. ಕ್ಷಮಿಸಿ. ಸಮಾಲೋಚನೆ ಎಂದು ಹೇಳಿದ್ದು ತಮಾಷೆಗೆ ಅಷ್ಟೇ.. ಇಲ್ಲಿ ಕಂಬಳಿಹುಳುಗಳು ಗಾಢ ನಿದ್ರೆಯಲ್ಲಿವೆ. ಅವು ಹಗಲಿನಲ್ಲಿ ಸುಮ್ಮನೆ ಹೀಗೆ ಒಂದೆಡೆ ನಿದ್ರಿಸುತ್ತವೆ ಮತ್ತು ರಾತ್ರಿಯಲ್ಲಿ ಚಟುವಟಿಕೆಯಿಂದ ಆಹಾರದ ಹುಡುಕಾಟದಲ್ಲಿ ತೊಡಗುತ್ತವೆ.

■ **ಪ.ನಾ.ಹಳ್ಳಿ ಹರೀಶ್ ಕುಮಾರ್, ತುಮಕೂರು**